ದಿಕ್ಕಿನಲ್ಲಿ promotion opportunity ಇರಬೇಕು. ಅದು 50%ರಷ್ಟು promotionನಿಂದ, 50% direct recruitmentನಿಂದ ಮಾಡಬೇಕೆಂದು ನಾವು ಇಲಾಖೆಯಲ್ಲಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಅದು ಹಣಕಾಸು ಇಲಾಖೆಗೆ ಹೋಗಿ, ನಂತರ ಸಚಿವ ಸಂಪುಟದ ಮುಂದೆ ಹೋಗಬೇಕಾಗುತ್ತದೆ. ಆದಷ್ಟು ಬೇಗನೆ ಇದರ ಬಗ್ಗೆ ಇತ್ಯರ್ಥ ಮಾಡುವುದು degree collegeಗಳಲ್ಲಿ, aided collegeಗಳಲ್ಲಿ ಯಾರಿಗೆ ಅರ್ಹತೆ ಇದೆ, ಅವರಿಗೆ ನ್ಯಾಯ ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಸರ್ಕಾರಿ ಶಿಕ್ಷಣ ತರಬೇತಿ ಸಂಸ್ಥೆ

112(1250); ಶ್ರೀ ಪ್ರಮೋದ್ ಮದ್ವರಾಜ್, (ಉಡುಪಿ)

ಅ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಲ್ಲಿ ಡಿ.ಇಡಿ., ತರಬೇತಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ರಾಜ್ಯದ ವಿವಿಧ ತರಬೇತಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ ಎಷ್ಟು?

ಇ) ಈ ಉಪನ್ಯಾಸಕರಿಗೆ ಸಾಕಾಗುವಷ್ಟು ಕರ್ತವ್ಯದ ಹೊರೆ ಇದೆಯೇ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ)

ಸಂಸ್ಥೆ	ವಿದ್ಯಾರ್ಥಿಗಳ ಒಟ್ಟು ಸಂಖ್ಯೆ
ಡಯಟ್	579
ಟಿ.ಟಿ.ಐ	487
ಒಟ್ಟು	**1066**

ಆ)

ಸಂಸ್ಥೆ	ಉಪನ್ಯಾಸಕರ ಸಂಖ್ಯೆ
ಡಯಟ್	570
ಟಿ.ಟಿ.ಐ	108
ಒಟ್ಟು	**678**

ಇ) ಇದೆ

ಶ್ರೀ ಜೆ.ಆರ್. ಲೋಬೋ (ಶ್ರೀ ಪ್ರಮೋದ್ ಮಧ್ವರಾಜ್ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ನೀಡಿರುವ ಉತ್ತರವನ್ನು ಪರಿಶೀಲಿಸಿದಾಗ ಡಯಟ್ ಮತ್ತು ಟಿ.ಟಿ.ಐ.ನಲ್ಲಿರುವಂತ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಒಟ್ಟು 1,066 ಇದೆ. ಇಲ್ಲಿರುವಂಥ ಉಪಾನ್ಯಾಸಕರ ಸಂಖ್ಯೆ ಒಟ್ಟು 678 ಇದೆ. ಅಂದರೆ 1:2 ಆಯಿತು. ಎರಡು ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಸಕರು ಇದ್ದಾರೆ. 3ನೇ ಪ್ರಶ್ನೆ ಈ ಉಪನ್ಯಾಸಕರಿಗೆ ಸಾಕಾಗುವಷ್ಟು ಕರ್ತವ್ಯದ ಹೊರೆ ಇದೆಯೇ? ಎಂದು ಕೇಳಿರುವುದಕ್ಕೆ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಯಾವ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಾರೆಂಬುದು ಅರ್ಥವಾಗುತ್ತಿಲ್ಲ. ಕೆಲವು ಕಡೆ ಡಯಟ್‌ಗಳಲ್ಲಿ ಮತ್ತು ಟಿ.ಟಿ.ಐ.ಗಳಲ್ಲಿ ಇದುವರೆಗೂ admissionಗಳು ಕೂಡ ಇಲ್ಲ. ಅಲ್ಲಿ ಅಧ್ಯಾಪಕರುಗಳು continue ಆಗುತ್ತಿದ್ದಾರೆ. ಇದನ್ನು ಏತಕ್ಕೋಸ್ಕರ re-organize ಮಾಡುತ್ತಿಲ್ಲ? ಇದು ಯಾವುದೂ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇವತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಹೆಚ್ಚಿಗೆ ಟೀಚರ್ಸ್ ಇರುವುದು ಗಮನಕ್ಕೆ

ಬಂದಿದೆ. ಆದರೆ workload ವಿಚಾರದಲ್ಲಿ ಹೇಳುವುದಾದರೆ, workload ಇಲ್ಲವೆಂದು ಅಲ್ಲ, workload ಇದೆ. ಆದರೆ ಹೆಚ್ಚು ಇರುವಂಥ ಟೀಚರ್ಸ್ ಅನ್ನು ಮರು ನಿಯುಕ್ತಿ ಮಾಡುವ ರೀತಿಯಲ್ಲಿ, deputation ಮೇಲೆ ಕಳುಹಿಸುವಂಥ ಪ್ರಕ್ರಿಯೆಯಲ್ಲಿದೆ. ಹಾಗಾಗಿ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಯಾವುದೇ ರೀತಿಯಾದಂಥ ಇವತ್ತು workload ಇಲ್ಲವೆನ್ನುವಂಥ ಪ್ರಶ್ನೆಯಲ್ಲ. ಇಲ್ಲಿ excess teachers ಇದ್ದಾರೆನ್ನುವಂಥದ್ದು ಇದೆ. ಆ excess teachers ಅನ್ನು ಹೇಗೆ ಮಾಡಬೇಕೆಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ. ಅವರಿಗೆ ಸದ್ಯಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೇ admissions ಇಲ್ಲ, teachers ಇದ್ದಾರೆ, ಮತ್ತೆ workload ಇರಲು ಹೇಗೆ ಸಾಧ್ಯ? ಇದನ್ನು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ, recheck ಮಾಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಉಪನ್ಯಾಸಕರಿಗೆ ಸಾಕಾಗುವಷ್ಟು ಕರ್ತವ್ಯದ ಹೊರೆ ಇದೆಯೇ? ಎಂದರೆ ಇದೆ, excess ಇದೆ, ಅದು ಸರ್ಕಾರಕ್ಕೆ ಬಿಟ್ಟದ್ದು, ನಿಮಗೆ ಯಾವುದೇ ರೀತಿಯಲ್ಲೂ ಕೂಡ workload ಇಲ್ಲವೆನ್ನುವಂಥ ಪ್ರಶ್ನೆ ಈಗ ಇಲ್ಲವಲ್ಲಾ..

ಶ್ರೀ ಸಿ.ಟಿ. ರವಿ:– ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಬಿ.ಎಡ್. ಕಾಲೇಜ್‌ನಲ್ಲಿ 6 ಜನ ಮಕ್ಕಳಿದ್ದು, 42 ಜನ ಟೀಚರ್ಸ್ ಇದ್ದಾರೆ. 6 ಮಕ್ಕಳು admission ಆಗಿರುವುದು, ಟೀಚರ್ಸ್ 42 ಇರುವುದು, ನಾವು workload ಇದೆಯೆಂದು ಹೇಳಬೇಕಾ? ಅದಕ್ಕೆ re-organize ಮಾಡುವ ಅವಶ್ಯಕತೆ ಇದೆಯೆಂದು ಹೇಳಿದ್ದು.

ಶ್ರೀ ಟಿ.ಬಿ. ಜಯಚಂದ್ರ:– ನಿಜ, ಟೀಚರ್ಸ್ excess ಇದ್ದಾರೆ.

ಶ್ರೀ ಸಿ.ಟಿ. ರವಿ:– ಎಲ್ಲಾ ಕಡೆಗಳಲ್ಲೂ ಬಿ.ಎಡ್. ಕಾಲೇಜುಗಳಲ್ಲಿ excess ಇದ್ದಾರೆ, admissions ಆಗುತ್ತಿಲ್ಲ, demand ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಹೌದು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಅವರಿಗೆ workload ಇದೆಯೇ? ಇದೆ. ಇನ್ನು excess teachers ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ ಬಿಡಿ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಉಪಾಧ್ಯಕ್ಷರೆ, ಸರ್ಕಾರಿ ಕ್ಷೇತ್ರದಲ್ಲಿ ಪ್ರತಿಯೊಬ್ಬರಿಗೂ ಅವರದ್ದೇ ಆದಂಥ job chart ಇದೆ, ಅವರಿಗೆ ಯಾವ್ಯಾವ ಕೆಲಸಗಳೆಂದು ನಿಯುಕ್ತಿಯಾಗುತ್ತದೆ. ಆ ಕೆಲಸಗಳಿಗೆ ಮಾತ್ರ ಅವರು ನಿಯುಕ್ತರಾಗಿರುವುದಿಲ್ಲವೇ? ಒಂದು ವೇಳೆ excess students ಏನಾದರೂ ಇದ್ದಿದ್ದರೆ.. ..

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಹೇಳುವಂಥದ್ದು ಏನೆಂದರೆ ಮಕ್ಕಳು ಎಷ್ಟು ಜನರಿದ್ದಾರೆ, classes ಎಷ್ಟು ಇದೆ, ಅಷ್ಟಕ್ಕೆ ಬೇಕಾದಷ್ಟು ಟೀಚರ್ಸ್ ನಿಮಗೆ ಇದ್ದಾರೆ. ಆದರೆ ಟೀಚರ್ಸ್ excess ಇದ್ದಾರೆ. ಸರ್ಕಾರಕ್ಕೆ admissions ಆಗದೇ ಇರುವಂಥದ್ದು ಗೊತ್ತಿದೆ. ಹಾಗಾಗಿ ಅದನ್ನು ಮರು ನಿಯುಕ್ತಿ ಮಾಡುವಂಥದ್ದರ ಪ್ರಕ್ರಿಯೆ ಕೂಡ ಚಾಲನೆಯಲ್ಲಿದೆ, deputation ಮೇಲೆ ಹೊರಗಡೆ ಕಳುಹಿಸುತ್ತಿದ್ದೇವೆ.

ಪ್ರಾಥಮಿಕ ಶಾಲೆಗಳಲ್ಲಿ C.P.Ed ಅಥವಾ D.P.Ed ದೈಹಿಕ ಶಿಕ್ಷಕರ ನೇಮಕಾತಿ

120(1308); ಶ್ರೀ ಭೂಸನೂರ ರಮೇಶ ಬಾಳಪ್ಪ (ಸಿಂದಗಿ)

ಅ) ಕಳೆದ ಏಳು ವರ್ಷಗಳಿಂದ ಪ್ರಾಥಮಿಕ ಶಾಲೆಗಳಲ್ಲಿ C.P.Ed ಅಥವಾ D.P.Ed ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ನೇಮಕಾತಿ ಇದುವರೆಗೆ ನಡೆಯದೆ ಇರುವುದರಿಂದ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?